**FORM A**
**PUBLIC ANNOUNCEMENT**
*(Regulation 14 of the Insolvency and Bankruptcy Board of India (Voluntary Liquidation Process) Regulations, 2017)*

**FOR THE ATTENTION OF THE STAKEHOLDERS OF EUROFINS CLINICAL DIAGNOSTICS BANGALORE PRIVATE LIMITED**

| | | |
|---|---|---|
| 1. | Name of Corporate Person | Eurofins Clinical Diagnostics Bangalore Private Limited |
| 2. | Date of Incorporation of Corporate Person | December 11, 2015 |
| 3. | Authority Under Which Corporate Person is Incorporated/ Registered | Ministry of Corporate Affairs, Registrar of Companies, Bangalore |
| 4. | Corporate Identity Number / ~~Limited Liability Identity Number~~ of Corporate Person | U74900KA2015FTC084665 |
| 5. | Address of The Registered Office ~~and Principal Office (if any)~~ of Corporate Person | 540/1, 1st Floor, Doddenakundi Industrial Area 2, Hoodi, Whitefield, Bangalore, Karnataka- 560048 |
| 6. | Liquidation Commencement Date of Corporate Person | December 31, 2024 |
| 7. | Name, Address, Email Address, Telephone Number and the registration number of the Liquidator | **Kiran Pandey**<br>**Address:** 1005, 10th Floor, Hemkunt House, 6, Prasad Nagar, Rajendra Place, New Delhi- 110008<br>**Email:** liquidationecdbpl@gmail.com<br>**Contact No.:** +91 9810929590<br>**IBBI Reg. No:** IBBI/IPA-002/IP-N01301/2024-2025/14441 |
| 8. | Last Date for Submission of Claims | January 30, 2025<br>(Within 30 days from the liquidation commencement date i.e. December 31, 2024) |

Notice is hereby given that **Eurofins Clinical Diagnostics Bangalore Private Limited** has commenced voluntary liquidation on **December 31, 2024**.

The stakeholders of Eurofins Clinical Diagnostics Bangalore Private Limited are hereby called upon to submit a proof of their claims, on or before January 30, 2025, to the liquidator at the address mentioned against item 7.

The financial creditors shall submit their proof of claims by electronic means only. All other stakeholders may submit the proof of claims in person, by post or by electronic means.

Submission of false or misleading proofs of claim shall attract penalties.

**Kiran Pandey**
**Liquidator of Eurofins Clinical Diagnostics Bangalore Private Limited**
**IBBI Reg. No: IBBI/IPA-002/IP-N01301/2024-2025/14441**
**AFA valid upto 31.12.2025**
**E-mail: liquidationecdbpl@gmail.com**
**Address: 1005, 10th Floor, Hemkunt House, 6,**
**Prasad Nagar, Rajendra Place, New Delhi- 110008**

Date: 04.01.2025
Place: New Delhi

# ನಾಳೆಯಿಂದ ಯುವನಿಧಿ ವಿಶೇಷ ನೋಂದಣಿ ಅಭಿಯಾನ

ಬೆಂಗಳೂರು, ಜ.4: 'ಯುವನಿಧಿ ಯೋಜನೆ'ಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹ ಅಭ್ಯರ್ಥಿಗಳು ನೋಂದಾಯಿಸುವಂತಾಗಲು ಜ.6 ರಿಂದ 20ರ ವರೆಗೆ ಯುವನಿಧಿ ವಿಶೇಷ ನೋಂದಣಿ ಅಭಿಯಾನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಎಲ್ಲ ರಾಜ್ಯ ಅಂಗೀಕೃತ ವಿಶ್ವವಿದ್ಯಾನಿಲಯಗಳ ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಹಮ್ಮಿಕೊಳ್ಳಲಾಗಿದೆ.

2023 ಹಾಗೂ 2024ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ತೇರ್ಗಡೆಯಾದ ಅಭ್ಯರ್ಥಿಗಳು ಈ ಅಭಿಯಾನದ ಪ್ರಯೋಜನ ಪಡೆದುಕೊಳ್ಳಬಹುದು. ಕರ್ನಾಟಕ ಸರಕಾರದ ಐದು ಖಾತರಿ ಯೋಜನೆಗಳಲ್ಲಿ ಒಂದಾದ 'ಯುವನಿಧಿ ಯೋಜನೆ'ಯು ರಾಜ್ಯದ 2023-24 ಹಾಗೂ 2024-25ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ತೇರ್ಗಡೆಯಾದ ಅರ್ಹ ನಿರುದ್ಯೋಗಿ ಯುವಕ, ಯುವತಿಯರಿಗೆ ನಿರುದ್ಯೋಗ ಭತ್ಯೆಯನ್ನು ಸಬಲೀಕರಣಗೊಳಿಸಲು ಜಾರಿಗೊಳಿಸಿರುವ ಸರಕಾರದ ಮಹತ್ವದ ಯೋಜನೆಯಾಗಿದೆ ಎಂದು ಪ್ರಕಟನೆ ತಿಳಿಸಿದೆ.

**ನೋಂದಣಿಗಾಗಿ ಅರ್ಹತೆ:** 2023-24 ಮತ್ತು 2024-25ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ತೇರ್ಗಡೆ ಹೊಂದಿದವರು. ಫಲಿತಾಂಶ ಪ್ರಕಟವಾದ 180 ದಿನಗಳ ನಂತರವೂ ಸಾರ್ವಜನಿಕ, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗದಲ್ಲಿರದವರು ಹಾಗೂ ಸ್ವಯಂ-ಉದ್ಯೋಗದಲ್ಲಿ ಇಲ್ಲದೆ ಇರುವವರು, ಉನ್ನತ ವ್ಯಾಸಂಗವನ್ನು ಮುಂದುವರಿಸದೇ ಇರುವವರು, ಕನಿಷ್ಠ 6 ವರ್ಷ ಕರ್ನಾಟಕದ ನಿವಾಸಿ ಆಗಿರಬೇಕು. ನೋಂದಣಿಗಾಗಿ ಸೇವಾಸಿಂಧು ಪೋರ್ಟಲ್ www.sevasindhugs.karnataka.gov.in ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು. ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ನ್ಯಾಡ್ ಪೋರ್ಟಲ್ https://nad.karnataka.gov.in ನಲ್ಲಿ ಇಂಡೀಕರಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಉದ್ಯೋಗ ವಿನಿಮಯ ಕಚೇರಿಗೆ ಭೇಟಿ ನೀಡುವುದು ಅಥವಾ ಸಹಾಯವಾಣಿ ಸಂಖ್ಯೆ 1800 5997154 ಸಂಪರ್ಕಿಸಬಹುದು ಎಂದು ಪ್ರಕಟನೆ ತಿಳಿಸಿದೆ.

# ಸಂಪ್ರದಾಯದೊಂದಿಗೆ ಹೊಸತನವನ್ನು ಸಂಯೋಜಿಸಬೇಕು: ಡಾ.ಎಂ.ಸಿ.ಸುಧಾಕರ್



ಬೆಂಗಳೂರು, ಜ.4: ಕೃಷಿ ನಮ್ಮ ಅಡಿಪಾಯ, ಆದರೆ ಜಾಗತೀಕರಣವು ಹಲವಾರು ಸವಾಲುಗಳು ಮತ್ತು ಅವಕಾಶಗಳನ್ನು ಒಡ್ಡಿದೆ. ಮುಂದಿನ ಪೀಳಿಗೆಯನ್ನು ಬೆಂಬಲಿಸಲು ನಾವು ಸಂಪ್ರದಾಯದೊಂದಿಗೆ ಹೊಸತನವನ್ನು ಸಂಯೋಜಿಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಕರೆ ನೀಡಿದ್ದಾರೆ.


ನಗರದ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿರುವ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೋ 2025ರ ಎರಡನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚಿಕ್ಕಬಳ್ಳಾಪುರ ಮತ್ತು ಕೋಲಾರದಂತಹ ಜಿಲ್ಲೆಗಳಲ್ಲಿನ ಗಮನಾರ್ಹ ಸಾಧನೆಗಳನ್ನು ಉಲ್ಲೇಖಿಸುತ್ತಾ ರೈತರು ನೀರಿನ ಕೊರತೆಯನ್ನು ನೀಗಿಸಲು ಮತ್ತು ವೈವಿಧ್ಯಮಯ ಬೆಳೆಗಳನ್ನು ಬೆಳೆಯಲು ಸುಧಾರಿತ ತಂತ್ರಜ್ಞಾನಗಳನ್ನು ಬಳಸುತ್ತಿದ್ದಾರೆ ಎಂದು ಹೇಳಿದರು.

ರೈತರು ಡ್ರ್ಯಾಗನ್ ಹಣ್ಣುಗಳು ಮತ್ತು ಖರ್ಜೂರಗಳನ್ನು ಬೆಳೆಸಲು ಸೂಕ್ಷ್ಮ ನೀರಾವರಿ ತಂತ್ರಗಳು ಮತ್ತು ಇಸ್ರೇಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ವಿಶೇಷವಾಗಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ, ಪಾಲಿಹೌಸ್‌ಗಳಲ್ಲಿ ವಿದೇಶಿ ಹೂವುಗಳನ್ನು ಬೆಳೆಸುವುದರೊಂದಿಗೆ ಪುಷ್ಪ ಕೃಷಿಯು ಪ್ರವರ್ಧಮಾನಕ್ಕೆ ಬರುತ್ತಿದೆ ಎಂದು ಹೇಳಿದ ಅವರು, ರಾಮನಗರ ಮತ್ತು ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆ ಕೃಷಿ ಮಾರುಕಟ್ಟೆಯನ್ನು ಸ್ಥಾಪಿಸಲು ನಡೆಯುತ್ತಿರುವ ಪ್ರಯತ್ನಗಳನ್ನು ಪ್ರಸ್ತಾಪಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಮಾತನಾಡಿ, ನಮ್ಮ ಜೀವನದಲ್ಲಿ ಕೃಷಿ ಬಹಳ ಕೇಂದ್ರಿತವಾಗಿತ್ತು, ಆದರೆ ತಾಂತ್ರಿಕ ಪ್ರಗತಿ ಮತ್ತು ಜಾಗತೀಕರಣದೊಂದಿಗೆ ನಾವು ಸ್ಪರ್ಧಾತ್ಮಕವಾಗಿ ಉಳಿಯಲು ಇತರ ಕ್ಷೇತ್ರಗಳನ್ನು ಅನ್ವೇಷಿಸಬೇಕು. ನಮ್ಮ ಕೃಷಿ ಪರಂಪರೆಯನ್ನು ಉಳಿಸಿಕೊಂಡು ವೈವಿಧ್ಯಮಯ ಉದ್ಯಮಗಳನ್ನು ಅಳವಡಿಸಿಕೊಳ್ಳಲು ಸಮುದಾಯದ ಯುವಕರನ್ನು ಪ್ರೇರೇಪಿಸಲು ಇಂತಹ ವೇದಿಕೆಗಳು ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಐಆರ್‌ಎಸ್ ಅಧಿಕಾರಿ ಜಯರಾಮ್, ವಿವಿಧ ಕ್ಷೇತ್ರಗಳ ಪ್ರಮುಖರಾದ ಡಾ. ಎಸ್.ವಿ.ಸುರೇಶ್, ನಂದೀಶ್ ರಾಜೇಗೌಡ, ದಿಲೀಪ್ ಕುಮಾರ್, ವಿ.ಎಸ್.ಅಶೋಕ್, ಡಾ.ಮಂಜುನಾಥ್ ಗೌಡ, ಡಾ.ಹೊನ್ನೇಗೌಡ, ನಾಗರಾಜ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

# ಅಗರ ಬಹಿಷ್ಕಾರ ಪ್ರಕರಣ: ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳು ಭೇಟಿ



ಯಳಂದೂರು, ಜ.4: ತಾಲೂಕಿನ ಅಗರ ಗ್ರಾಮದ ಲಿಂಗಾಯಿತ ಬಡಾವಣೆಯ ಮಠದ ಬೀದಿಯಲ್ಲಿ ವಾಸವಾಗಿರುವ ವೀರಣ್ಣ, ಗೌರಮ್ಮ ಹಾಗೂ ಇವರ ಮಗ ವಿ. ಸುರೇಶ ಎಂಬವರ ಕುಟುಂಬಕ್ಕೆ ಹಾಕಿರುವ ಬಹಿಷ್ಕಾರದ ಹಿನ್ನೆಲೆಯಲ್ಲಿ ಶನಿವಾರ ಗ್ರಾಮಕ್ಕೆ ತಹಶೀಲ್ದಾರ್, ಸಮಾಜ ಕಲ್ಯಾಣಾಧಿಕಾರಿ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಈ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ.

ಬಹಿಷ್ಕಾರಕ್ಕೆ ಒಳಗಾಗಿರುವ ಕುಟುಂಬದವರು ಪರಿಶಿಷ್ಟ ಪಂಗಡದ ನಾಯಕ ಜನಾಂಗದವರಿಗೆ ಮನೆಯನ್ನು ಬಾಡಿಗೆಗೆ ನೀಡಿರುವುದಕ್ಕೆ ಇವರ ಕುಟುಂಬವನ್ನು ಲಿಂಗಾಯಿತ ಜನಾಂಗದವರು ಸೇರುವ ಧಾರ್ಮಿಕ ಸಭೆ, ಸಮಾರಂಭಗಳು ಹಾಗೂ ದೇಗುಲಕ್ಕೆ ಬಾರದಂತೆ ತಡೆಯೊಡ್ಡುತ್ತಿದ್ದಾರೆ ಎಂದು ಕುಟುಂಬದ ಸದಸ್ಯ ವಿ.ಸುರೇಶ್ ಆರೋಪಿಸಿದ್ದರು.

ಈ ಬಗ್ಗೆ ಪತ್ರಿಕೆಯಲ್ಲಿ ವರದಿ ಪ್ರಕಟವಾಗುತ್ತಿದ್ದಂತೆಯೇ ಗ್ರಾಮದ ಹಿಂಡಿ ಮಾರಮ್ಮ ದೇಗುಲದ ಮುಂಭಾಗ ತಹಶೀಲ್ದಾರ್ ಜಯಪ್ರಕಾಶ್ ನೇತೃತ್ವದಲ್ಲಿ, ಪಿಎಸ್‌ಐ ಕರಿಬಸಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೇಶವಮೂರ್ತಿ ನೇತೃತ್ವದ ತಂಡ ಸಭೆ ನಡೆಸಿದರು. ಗ್ರಾಮದಲ್ಲಿ ವಾಸವಾಗಿರುವ ಎಲ್ಲ ಕೋಮಿನ ಮುಖಂಡರು, ಲಿಂಗಾಯಿತ ಸಮುದಾಯದ ಯಜಮಾನರು, ಮುಖಂಡರು, ಹಾಗೂ ವಿ.ಸುರೇಶ್ ಇವರ ತಂದೆ ವೀರಣ್ಣರನ್ನು ಸೇರಿಸಿ ಸಭೆ ನಡೆಸಿದರು.

ಈ ಬಗ್ಗೆ ತಹಶೀಲ್ದಾರ್ ಜಯಪ್ರಕಾಶ್ ಮಾಹಿತಿ ನೀಡಿ, ನಾವು ಪೊಲೀಸ್ ಇಲಾಖೆಯ ಸಿಬ್ಬಂದಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ರಜಸ್ವ ನಿರೀಕ್ಷಕರು ಸೇರಿದಂತೆ ಅನೇಕರು ಸಭೆ ನಡೆಸಿದ್ದೇವೆ. ಇವರ ಜನಾಂಗದವರು ನಾವು ಬಹಿಷ್ಕಾರ ಹಾಕಿಲ್ಲ, ಯಾವುದೇ ಜಾತಿಯ ಸಭೆ, ಸಮಾರಂಭಗಳಿಗೆ, ದೇವಸ್ಥಾನಕ್ಕೆ ಬಾರದಂತೆ ನಿರ್ಬಂಧ ಹೇರಿಲ್ಲ. ಯಾವುದೋ ಹಳೆಯ ದ್ವೇಷದಿಂದ ಇವರು ಜನಾಂಗದ ಕೆಲ ಮುಖಂಡರ ಮೇಲೆ ದೂರು ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ. ಇಬ್ಬರೂ ಸೌಹಾರ್ದದಿಂದ ನಡೆದುಕೊಂಡು ಹೋಗುವಂತೆ ಮನವರಿಕೆ ಮಾಡಲಾಗಿದೆ. ಆದರೆ ಸುರೇಶ್ ಇದಕ್ಕೆ ಒಪ್ಪುತ್ತಿಲ್ಲ, ಲಿಂಗಾಯಿತ ಜನಾಂಗದ ಕೆಲ ಮುಖಂಡರ ಮೇಲೆ ಎಫ್‌ಐಆರ್ ದಾಖಲಿಸಬೇಕೆಂದು ಪಟ್ಟು ಹಿಡಿದಿದ್ದಾರೆ. ಈ ಪ್ರಕರಣವನ್ನು ಸೌಹಾರ್ದಯುತವಾಗಿ ಬಗೆಹರಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಮುಂದುವರಿದಿದೆ. ಈ ಬಗ್ಗೆ ಪೊಲೀಸರಿಗೂ ಮಾಹಿತಿ ನೀಡಲಾಗಿದೆ. ಇಲ್ಲಿ ನಡೆದಿರುವ ಸಂಪೂರ್ಣ ಘಟನಾವಳಿಗಳ ಬಗ್ಗೆ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ಎಸ್‌ಪಿರವರಿಗೆ ವರದಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

# ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಲು ಆಪ್ ಆಗ್ರಹ

ಬೆಂಗಳೂರು, ಜ. 4: ರಾಜ್ಯ ಸರಕಾರ ಸಾರಿಗೆ ಬಸ್‌ಗಳ ದರ ಶೇ.15ರಷ್ಟು ಏರಿಕೆ ನಿರ್ಧಾರವನ್ನು ಕೂಡಲೆ ಹಿಂಪಡೆಯಬೇಕೆಂದು ಆಮ್ ಆದ್ಮಿ ಪಕ್ಷ ಆಗ್ರಹಿಸಿದೆ.

ಶನಿವಾರ ನಗರದ ಫ್ರೀಡಂಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಧರಣಿಯಲ್ಲಿ ಪ್ರಧಾನ ಕಾರ್ಯದರ್ಶಿ ಜಗದೀಶ್ ಚಂದ್ರ ಮಾತನಾಡಿ, ಕಾಂಗ್ರೆಸ್ ಸರಕಾರ ಆಮ್ ಆದ್ಮಿ ಪಕ್ಷದ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿ ಅಧಿಕಾರ ಹಿಡಿದಿದೆ. ಆದರೆ ಅವರು ಭ್ರಷ್ಟಚಾರ ನಿಲ್ಲಿಸದೆ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ನೀಡುತ್ತಿಲ್ಲ ಎಂದು ದೂರಿದರು.

ಗ್ಯಾರೆಂಟಿ ಯೋಜನೆಗಳನ್ನು ನೀಡುವುದಕ್ಕಾಗಿ ದರ ಏರಿಕೆ ಮಾಡುತ್ತಿರುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡು ಬಜೆಟ್‌ಗಳಲ್ಲಿ 2ಲಕ್ಷ ಕೋಟಿ ರೂ.ಸಾಲ ಮಾಡಿದ್ದಾರೆ. ಈ ದುಡ್ಡು ಯಾರ ಜೇಬುಗೆ ಸೇರುತ್ತಿದೆ ಎಂಬುದನ್ನು ಜನತೆಗೆ ತಿಳಿಸಬೇಕು. ಈಗಾಗಲೇ ಸ್ಟ್ಯಾಂಪ್ ಡ್ಯೂಟಿ, ಅಬಕಾರಿ ಸುಂಕ, ವಿದ್ಯುತ್ ದರ, ಹಾಲಿನ ದರ ಎಲ್ಲವನ್ನು ಗಗನಕ್ಕೆ ಮುಟ್ಟಿಸಿದ್ದಾರೆ. ಮುಂದಿನ ದಿನಗಳಲ್ಲಿ ನೀರಿನ ದರವನ್ನು ಏರಿಸುತ್ತಾರೆ. ಜನಪರ ಕಾಳಜಿ ಇಲ್ಲದ ಸರಕಾರ ಆರ್ಥಿಕ ದಿವಾಳಿಯಾಗುವ ಹಂತಕ್ಕೆ ತಲುಪಿರುವ ಅನುಮಾನ ಜನತೆಯಲ್ಲಿ ಕಾಡುತ್ತಿದೆ ಎಂದು ಜಗದೀಶ್ ಚಂದ್ರ ಟೀಕಿಸಿದರು.

## ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ. ಕಾಪಾಅ/ಪಂರಾಇಂವಿ/ಬೆಂಗ್ರಾ/ತಾಂಶಾ/2024–25 ದಿನಾಂಕ: 01.01.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 28/2024–25 ದಿನಾಂಕ: 01.01.2025**
ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.01.2025 ಸಂಜೆ. 5.30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/BR/4121/SPAN/2024-25

## ಫಾರ್ಮ್ ಎ
## ಸಾರ್ವಜನಿಕ ಪ್ರಕಟಣೆ

[ಭಾರತದ ದಿವಾಳಿತನ ಮತ್ತು ಪಾಪರಿಕೆ ಮಂಡಳಿಯ ನಿಬಂಧನೆಗಳ ನಿಬಂಧನೆ 14ರ ಅಡಿಯಲ್ಲಿ (ಸ್ವಯಂ ದಿವಾಳಿತನ ನಿರ್ಣಯ ಪ್ರಕ್ರಿಯೆ) ನಿಬಂಧನೆಗಳು–2017]
ಯುರೋಫಿನ್ಸ್ ಕ್ಲಿನಿಕಲ್ ಡಯಾಗ್ನೋಸ್ಟಿಕ್ಸ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್‌ನ ಹಕ್ಕುದಾರರ ಗಮನಕ್ಕೆ

| | | |
|---|---|---|
| 1. | ಕಾರ್ಪೊರೇಟ್ ವ್ಯಕ್ತಿಯ ಹೆಸರು | ಯುರೋಫಿನ್ಸ್ ಕ್ಲಿನಿಕಲ್ ಡಯಾಗ್ನೋಸ್ಟಿಕ್ಸ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್ |
| 2. | ಕಾರ್ಪೊರೇಟ್ ವ್ಯಕ್ತಿಯ ನೋಂದಣಿ ದಿನಾಂಕ | 11 ಡಿಸೆಂಬರ್ 2015 |
| 3. | ಯಾವ ಪ್ರಾಧಿಕಾರದಡಿ ಕಾರ್ಪೊರೇಟ್ ವ್ಯಕ್ತಿ ನೋಂದಣಿಯಾಗಿದ್ದಾರೆ | ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ರಿಜಿಸ್ಟ್ರಾರ್ ಆಫ್ ಕಂಪನೀಸ್, ಬೆಂಗಳೂರು |
| 4. | ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಐಡೆಂಟಿಟಿ ಸಂಖ್ಯೆ | U74900KA2015FTC084665 |
| 5. | ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿ (ಇದ್ದಲ್ಲಿ) ಅದರ ವಿಳಾಸ. | 540/1, 1 ಸ್ಟ ಮಹಡಿ, ದೊಡ್ಡೇನಕುಂಡಿ ಇಂಡಸ್ಟ್ರಿಯಲ್ ಏರಿಯಾ 2, ಹೂಡಿ, ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ– 560048 |
| 6. | ಕಾರ್ಪೊರೇಟ್ ವ್ಯಕ್ತಿಗೆ ಸಂಬಂಧಿಸಿದಂತೆ ದಿವಾಳಿತನ ಪ್ರಕ್ರಿಯೆ ಆರಂಭದ ದಿನಾಂಕ | 31 ಡಿಸೆಂಬರ್ 2024 |
| 7. | ಸಮಾಪನಾದಾರರ ಹೆಸರು, ವಿಳಾಸ, ಇ–ಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ | ಸಿಎಸ್ ಕಿರಣ್ ಪಾಂಡೆ<br>ವಿಳಾಸ: 1005, 10 ನೇ ಮಹಡಿ, ಹೇಮಕುಂಟ್ ಹೌಸ್, 6, ರಾಜೇಂದ್ರ ಪ್ಲೇಸ್, ನವದೆಹಲಿ–110008<br>ಇಮೇಲ್: liquidationecdbpl@gmail.com<br>ಸಂಪರ್ಕ ಸಂಖ್ಯೆ: +91 9810929590<br>IBBI ಸಂಖ್ಯೆ: IBBI/IPA-002/IP-N01301/2024-2025/14441 |
| 8. | ಕ್ಲೇಮ್‌ಗಳ ಸಲ್ಲಿಕೆಗೆ ಕೊನೆಯ ದಿನಾಂಕ | ಜನವರಿ 30, 2025 (ದಿವಾಳಿ ಪ್ರಾರಂಭದ ದಿನಾಂಕದಿಂದ 30 ದಿನಗಳಲ್ಲಿ ಅಂದರೆ ಡಿಸೆಂಬರ್ 31, 2024) |

ಈ ಮೂಲಕ ಗಮನಕ್ಕೆ ತರುವುದೇನೆಂದರೆ **ಯುರೋಫಿನ್ಸ್ ಕ್ಲಿನಿಕಲ್ ಡಯಾಗ್ನೋಸ್ಟಿಕ್ಸ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್** ತನ್ನ ಸ್ವಯಂ ಸಮಾಪನಾ ಪ್ರಕ್ರಿಯೆಯನ್ನು 31 ಡಿಸೆಂಬರ್ 2024 ರಂದು ಆರಂಭಿಸಿದೆ.
**ಯುರೋಫಿನ್ಸ್ ಕ್ಲಿನಿಕಲ್ ಡಯಾಗ್ನೋಸ್ಟಿಕ್ಸ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್**ನ ಎಲ್ಲ ಹಕ್ಕುದಾರರಿಗೆ ಈ ಮೂಲಕ ತಮ್ಮ ಕ್ಲೇಮ್‌ಗಳ ಪುರಾವೆಗಳನ್ನು **30 ಜನವರಿ 2025**ರ ಮೊದಲು ಸಮಾಪನಾದಾರರಿಗೆ ಐಟಂ 7ರಲ್ಲಿ ನಮೂದಿಸಿದ ವಿಳಾಸಕ್ಕೆ ಸಲ್ಲಿಸುವಂತೆ ಕರೆ ನೀಡಲಾಗುತ್ತಿದೆ.
ಹಣಕಾಸು ಸಾಲದಾರರು ತಮ್ಮ ಕ್ಲೇಮ್‌ಗಳನ್ನು ಪುರಾವೆಗಳ ಸಹಿತ ಇಲೆಕ್ಟ್ರಾನಿಕ್ ವಿಧಾನದ ಮೂಲಕವೇ ಸಲ್ಲಿಸಬೇಕು. ಎಲ್ಲ ಇತರ ಹಕ್ಕುದಾರರು ತಮ್ಮ ಕ್ಲೇಮ್‌ಗಳನ್ನು ಪುರಾವೆಯ ಸಹಿತ ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಇಲೆಕ್ಟ್ರಾನಿಕ್ ವಿಧಾನದ ಮೂಲಕ ಸಲ್ಲಿಸಬಹುದಾಗಿದೆ. **ಕ್ಲೇಮ್‌ಗಳಿಗೆ ತಪ್ಪು ಅಥವಾ ತಪ್ಪುದಾರಿಗೆಳೆಯುವಂಥ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ವಿಧಿಸಲಾಗುತ್ತದೆ.**

ಸಹಿ/-ಸಿಎಸ್ ಕಿರಣ್ ಪಾಂಡೆ
ಯುರೋಫಿನ್ಸ್ ಕ್ಲಿನಿಕಲ್ ಡಯಾಗ್ನೋಸ್ಟಿಕ್ಸ್ ಬೆಂಗಳೂರು ಪ್ರೈವೇಟ್ ಲಿಮಿಟೆಡ್‌ನ ಲಿಕ್ವಿಡೇಟರ್
ದಿನಾಂಕ: 04.01.2025
ಸ್ಥಳ: ನವದೆಹಲಿ
IBBI Reg. No: IBBI/IPA-002/IP-N01301/2024-2025/14441
ಎಎಫ್‌ಎ 31.12.2025 ರವರೆಗೆ ಮಾನ್ಯವಾಗಿರುತ್ತದೆ. ಇ-ಮೇಲ್: liquidationecdbpl@gmail.com
ವಿಳಾಸ: 1005, 10 ನೇ ಮಹಡಿ, ಹೇಮಕುಂಟ್ ಹೌಸ್, 6, ರಾಜೇಂದ್ರ ಪ್ಲೇಸ್, ನವದೆಹಲಿ-110008

# ಚಿತ್ರಕಲಾ ಪರಿಷತ್‌ನ ಆವರಣದಲ್ಲಿ ಇಂದು ಚಿತ್ರಸಂತೆಗೆ ಚಾಲನೆ

ಬೆಂಗಳೂರು, ಜ.4: ಚಿತ್ರಕಲಾ ಪರಿಷತ್ ವತಿಯಿಂದ ಇಲ್ಲಿನ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್‌ನ ಆವರಣದಲ್ಲಿ ಜ.5ರಂದು 22ನೇ ಚಿತ್ರಸಂತೆ ನಡೆಯಲಿದ್ದು, ಬೆಳಗ್ಗೆ 10:30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಲಾ ಪ್ರದರ್ಶನ ಉದ್ಘಾಟಿಸಲಿದ್ದಾರೆ.

**ಚಿತ್ರಸಂತೆ ನಿಮಿತ್ತ ಸಂಚಾರ ನಿರ್ಬಂಧ:** ಕುಮಾರಕೃಪಾ ರಸ್ತೆಯಲ್ಲಿ ಚಿತ್ರಸಂತೆ ನಡೆಯುವ ಕಾರಣ, ಕುಮಾರಕೃಪಾ ರಸ್ತೆಯ ವಿಂಡ್ಸ್ ಮ್ಯಾನರ್ ವೃತ್ತದಿಂದ ಶಿವಾನಂದ ವೃತ್ತದವರೆಗೆ (ಈಶಾನ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿನ ಕಡೆಗೆ) ಜ.5ರಂದು ಎಲ್ಲ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ರವಿವಾರ ಬೆಳಗ್ಗೆ 6ರಿಂದ ರಾತ್ರಿ 9 ಗಂಟೆವರೆಗೆ ಈ ಮಾರ್ಗದಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದ್ದು, ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಕುಮಾರಕೃಪಾ ರಸ್ತೆಯ ಕಡೆಗೆ ತೆರಳುವ ವಾಹನಗಳು ರೇಸ್ ವ್ಯೂ ಜಂಕ್ಷನ್‌ನಲ್ಲಿ ಬಸವೇಶ್ವರ ವೃತ್ತಕ್ಕೆ ಸಾಗಿ ಅಲ್ಲಿಂದ ಬಸವೇಶ್ವರ ವೃತ್ತದಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಹಳೇ ಹೈಗ್ರೆಂಡ್ಸ್ ಜಂಕ್ಷನ್ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಸಾಗಬಹುದು.

ಟಿ.ಚೌಡಯ್ಯ ರಸ್ತೆಯಿಂದ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕುಮಾರಕೃಪಾ ರಸ್ತೆಗೆ ಪ್ರವೇಶ ಪಡೆಯುವ ವಾಹನಗಳು, ಹಳೇ ಹೈಗೌಂಡ್ಸ್ ಜಂಕ್ಷನ್‌ಗೆ ನೇರವಾಗಿ ಸಾಗಿ, ಎಲ್‌ಆರ್‌ಡಿಇ ಬಳಿ ಬಲಕ್ಕೆ ತಿರುವು ಪಡೆದು ಬಸವೇಶ್ವರ ವೃತ್ತ ದಾಟಿ ರೇಸ್ ಕೋರ್ಸ್ ರಸ್ತೆ ಮೂಲಕ ಮುಂದಕ್ಕೆ ಸಾಗಬಹುದು.

ಟಿ.ಚೌಡಯ್ಯ ರಸ್ತೆಯಲ್ಲಿ ಹೈಗ್ರೆಂಡ್ ಜಂಕ್ಷನ್‌ನಿಂದ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕುಮಾರಕೃಪಾ ರಸ್ತೆಗೆ ಪ್ರವೇಶ ಪಡೆಯುವ ವಾಹನಗಳು ನೇರವಾಗಿ ಆರ್‌ಪಿ ರಸ್ತೆ ಮೂಲಕ ಮುಂದಕ್ಕೆ ಸಾಗಬಹುದು. ನೆಹರೂ ವೃತ್ತದಿಂದ ಸ್ಟೀಲ್ ಬ್ರಿಡ್ಜ್ ಕೆಳಭಾಗದಲ್ಲಿ ಶಿವಾನಂದ ವೃತ್ತದ ಮೂಲಕ ಟ್ರಿಲೈಟ್ ಜಂಕ್ಷನ್ ಮತ್ತು ರೇಸ್ ಕೋರ್ಸ್ ಕಡೆಗೆ ಸಾಗುವ ವಾಹನಗಳು ನೆಹರೂ ವೃತ್ತದಿಂದ ಸ್ಟೀಲ್ ಬ್ರಿಡ್ಜ್ ಮೂಲಕ ಸಾಗಿ ಟ್ರಿಲೈಟ್ ಜಂಕ್ಷನ್ ಹಾಗೂ ರೇಸ್ ಕೋರ್ಸ್ ರಸ್ತೆ ಕಡೆಗೆ ತೆರಳಬಹುದು.

ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಬರುವ ವಾಹನಗಳು ಟ್ರಿಲೈಟ್ ಜಂಕ್ಷನ್- ಬಸವೇಶ್ವರ ವೃತ್ತ- ಹಳೇ ಹೈಗ್ರೆಂಡ್ಸ್ ಜಂಕ್ಷನ್ - ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಮುಂದಕ್ಕೆ ಸಾಗಬೇಕು. ಟಿ.ಚೌಡಯ್ಯ ರಸ್ತೆಯಿಂದ ಬಂದು ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕೆ.ಕೆ.ರಸ್ತೆ ಪ್ರವೇಶಿಸುವ ವಾಹನಗಳು ಟಿ.ಚೌಡಯ್ಯ ರಸ್ತೆ ಹಳೇ ಹೈಗೌಂಡ್ ಜಂಕ್ಷನ್ - ಎಲ್‌ಆರ್‌ಡಿಇ- ಬಸವೇಶ್ವರ ವೃತ್ತ ರೇಸ್ ಕೋರ್ಸ್ ರಸ್ತೆ ಮೂಲಕ ಮುಂದಕ್ಕೆ ಸಾಗಬಹುದು.

**ಚಿತ್ರಸಂತೆಯ ವಾಹನ ನಿಲುಗಡೆ ವ್ಯವಸ್ಥೆ:** ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ನಾಲ್ಕು ಚಕ್ರಗಳ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಕ್ರೆಸೆಂಟ್ ರಸ್ತೆಯಲ್ಲಿ, ಗುರುರಾಜ ಕಲ್ಯಾಣ ಮಂಟಪದಿಂದ ಹೋಟೆಲ್ ಜನಾರ್ದನದವರೆಗೆ ರಸ್ತೆಯ ಪಶ್ಚಿಮಕ್ಕೆ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ರೇಸ್ ಕೋರ್ಸ್ ರಸ್ತೆ, ಟ್ರಿಲೈಟ್ ಜಂಕ್ಷನ್‌ನಿಂದ ಮೌರ್ಯ ಜಂಕ್ಷನ್‌ವರೆಗೆ, ರಸ್ತೆಯ ಪೂರ್ವ ಭಾಗಕ್ಕೆ ನಾಲ್ಕು ಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದೆ.

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ನಂ:ಬೆಂಅಪ್ರಾ/ನಯೋಸ/CLU–254/2528/2024–25 ದಿನಾಂಕ:03.01.2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ ಅಜಯ್ ವಿಜಯ್ ಕುಮಾರ್ | ಬೆಂಗಳೂರು ಪೂರ್ವ | ಬಿದರಹಳ್ಳಿ | ಕಾಡುಸೊಣ್ಣಪ್ಪನಹಳ್ಳಿ | 59/1 | 2–39 | ವ್ಯವಸಾಯ | ವಸತಿ |
| | | | | | 59/2 | 0–26 | | |
| | | | | | 59/3 | 0–35 | | |
| | | | | | ಒಟ್ಟು | 4–20 | | |

**ಷರಾ:** ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

# ಇಂದು ಸಚಿವ ಚಲುವರಾಯಸ್ವಾಮಿ ಜಿಲ್ಲಾ ಪ್ರವಾಸ

ಮಂಡ್ಯ, ಜ.4: ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಜ.5ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಬೆಳಗ್ಗೆ 8:30ಕ್ಕೆ ಶುಕ್ರವಾರ ನಿಧನರಾದ ಮದ್ದೂರಿನ ಮಾಜಿ ಶಾಸಕಿ ಜಯವಾಣಿ ಮಂಚೇಗೌಡ ಮನೆಗೆ ಭೇಟಿ ನೀಡಲಿದ್ದಾರೆ. 10 ಗಂಟೆಗೆ ಮಂಡ್ಯ ತಾಲೂಕು ಕೆರಗೋಡು ಆರಕ್ಷಕ ವೃತ್ತ ನಿರೀಕ್ಷಕರ ಕಚೇರಿಯ ನೂತನ ಕಟ್ಟಡ ಉದ್ಘಾಟಿಸಲಿದ್ದಾರೆ.

ಬೆಳಗ್ಗೆ 10:30ಕ್ಕೆ ಮಾರಗೌಡನಹಳ್ಳಿ ವ್ಯವಸಾಯ ಸೇವಾ ಸಹಕಾರ ಸಂಘದ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದು, 11ಕ್ಕೆ ಕಾಂಗ್ರೆಸ್ ಮುಖಂಡ ದ್ಯಾಪಸಂದ್ರದ ಶಂಕರಲಿಂಗೇಗೌಡರ ಮನೆಗೆ ಭೇಟಿ ನೀಡಲಿದ್ದಾರೆ. ಮಧ್ಯಾಹ್ನ 1:30ಕ್ಕೆ ನಾಗಮಂಗಲ ತಾಲೂಕಿನ ಮದ್ದೇನಹಟ್ಟಿ ಗ್ರಾಮ, 3 ಗಂಟೆಗೆ ಚೌಧರಿಕೊಪ್ಪಲು ಗ್ರಾಮ, ಸಂಜೆ 4:30ಕ್ಕೆ ಕಾಚೇನಹಳ್ಳಿ ಗ್ರಾಮದ ಶ್ರೀ ಓಂ ಶಕ್ತಿ ದೇವಸ್ಥಾನಕ್ಕೆ ಭೇಟಿ ನೀಡುವರು.

ಸಂಜೆ 5 ಗಂಟೆಗೆ ನಾಗಮಂಗಲ ತಾಲೂಕಿನ ಹುಲಿಕೆರೆ ಗ್ರಾಮದ ಗ್ರಾಮ ಪಂಚಾಯತ್ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, 5:30ಕ್ಕೆ ಹುಲಿಕೆರೆ ಗ್ರಾಮದ ರಸ್ತೆಯ ಮೂಲಕ ಬೆಳ್ಳೂರು ಕ್ರಾಸ್, ನೆಲಮಂಗಲ ಮಾರ್ಗವಾಗಿ ಕೇಂದ್ರ ಸ್ಥಾನ ಬೆಂಗಳೂರು ತಲುಪಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಜಿಗಣಿ ಪುರಸಭಾ ಕಾರ್ಯಾಲಯ

ಜಿಗಣಿ ಹೋಬಳಿ, ಜಿಗಣಿ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560 105
ದೂರವಾಣಿ :080-29760400 Email–itstaff_ulb_jigani@yahoo.com, jiganideo@gmail.com

ಕ್ರ.ಸಂ: ಜಿ.ಪು.ಕಾ/ತಾಂ.ಶಾ/ಟೆಂ.ಪ್ರ/21/2024–25 ದಿನಾಂಕ: 04.01.2025

**ಟೆಂಡರ್ ಪ್ರಕಟಣೆ**
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(Through GOK Kppp Portal
(https://kppp.karnataka.gov.inonly)

ಜಿಗಣಿ ಪುರಸಭೆ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಪುರಸಭಾ ನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲ KPP-Portal ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು KPP portal websiteನಲ್ಲಿ ಮಾಹಿತಿಯನ್ನು ಪಡೆದು ಭಾಗವಹಿಸಬಹುದಾಗಿರುತ್ತದೆ.

| | Indent No |
|---|---|
| 01 | DMA/2024-25/OW/WORK_INDENT34438 |
| 02 | |

1. ಕಾಮಗಾರಿಗಳ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21.01.2025. 16:00 ಘಂಟೆಗೆ
2. ಟೆಂಡರ್‌ನ್ನು ತೆರೆಯುವ ದಿನಾಂಕ:23.01.2025. ಸಮಯ 16:30 ಘಂಟೆ ನಂತರ ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
3. ದೂರವಾಣಿ ಸಂಖ್ಯೆ:080–29760400 ಇಮೇಲ್: itstaff_ulb_jigani@yahoo.com
4. ಪುರಸಭೆಯ ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಗಳ ಬಿಲ್ಲನ್ನು ಪಾವತಿಸಲಾಗುವುದು.

ಸಹಿ/– ಅಧ್ಯಕ್ಷರು ಪುರಸಭೆ ಜಿಗಣಿ
ಸಹಿ/– ಮುಖ್ಯಾಧಿಕಾರಿ ಪುರಸಭೆ ಜಿಗಣಿ

# ಒಳಗುತ್ತಿಗೆಗೆ ನೇಮಿಸಿಕೊಳ್ಳಲು ಆಗ್ರಹಿಸಿ ಜ.28ರಿಂದ ಅನಿರ್ಧಿಷ್ಟಾವಧಿ ಧರಣಿ

ಬೆಂಗಳೂರು, ಜ.4: ಇಂಧನ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರನ್ನು ಒಳಗುತ್ತಿಗೆ ನೌಕರರನ್ನಾಗಿ ನೇಮಿಸಿಕೊಳ್ಳುವಂತೆ ಆಗ್ರಹಿಸಿ ಜ.28ರಿಂದ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ಧಿಷ್ಟಾವಧಿ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಟಿಸಿಎಸ್ ಮತ್ತು ಎಸ್ಕಾಂ ಹೊರಗುತ್ತಿಗೆ ನೌಕರರ ಹಿತರಕ್ಷಣಾ ವೇದಿಕೆ ಪ್ರಧಾನ ಕಾರ್ಯದರ್ಶಿ ನಾಗಪ್ಪ ಭಾವಿಕಟ್ಟೆ ಹೇಳಿದ್ದಾರೆ

ಶನಿವಾರ ನಗರದ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸರಕಾರ ಜ.27ರ ಒಳಗೆ ನಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕು ಇಲ್ಲದಿದ್ದರೆ ಕುಟುಂಬ ಸಮೇತ ಅನಿರ್ಧಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ನಾಗಪ್ಪ ಭಾವಿಕಟ್ಟೆ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಮೇಲುಕೋಟೆ ಬೆಟ್ಟಸ್ವಾಮಿಗೌಡ, ರಾಜ್ಯಾಧ್ಯಕ್ಷ ಲೀಲಾಸಾಗರ್ ಎಂ.ಎಸ್., ಉಪಾಧ್ಯಕ್ಷ ಪರಶುರಾಮ್ ರಾಥೋಡ್, ಪ್ರಧಾನ ಕಾರ್ಯದರ್ಶಿಗಳಾದ ರಾಘವೇಂದ್ರ ಉರಣಕರ್, ಮಂಜುನಾಥ್ ಹಾದಿಮುನಿ, ಜಿನೇಂದ್ರ ಕುಮಾರ್ ಬಿ.ಪಿ., ಅರ್ಜುನ್ ಗಾಣಿಗೇರ, ಮನೋಹರ್ ಸಿ.ಎಚ್., ಜಿಲ್ಲಾಧ್ಯಕ್ಷ ಮಲ್ಲೇಶ್ ಬಿ.ಜಿ.ಉಪಸ್ಥಿತರಿದ್ದರು.

# ಆಶಾ ಕಾರ್ಯಕರ್ತೆಯರ ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಜ.7ರಿಂದ ಅನಿರ್ಧಿಷ್ಟಾವಧಿ ಧರಣಿ

ಬೆಂಗಳೂರು, ಜ.4: ಆಶಾ ಕಾರ್ಯಕರ್ತೆಯರಿಗೆ ಮಾಸಿಕ 15 ಸಾವಿರ ರೂ.ಗೌರವಧನ ನೀಡಬೇಕು. ಹೆಚ್ಚುವರಿ ಕೆಲಸ ಮತ್ತು ನಗರ ಜೀವನದ ದುಬಾರಿ ಖರ್ಚು ವೆಚ್ಚಗಳಿಗೆ ಗೌರವಧನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜ.7ರಿಂದ ನಗರ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆರ ಸಂಘದ ವತಿಯಿಂದ ಅನಿರ್ಧಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ.

ಶನಿವಾರ ಈ ಕುರಿತು ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮೀ ಪತ್ರಿಕಾ ಹೇಳಿಕೆ ನೀಡಿದ್ದು, ರಾಜ್ಯಾದ್ಯಂತ 42 ಸಾವಿರ ಆಶಾ ಕಾರ್ಯಕರ್ತೆಯರು ಹಗಲಿರುಳು ಬಡಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಆರೋಗ್ಯ ಇಲಾಖೆಯಲ್ಲಿ ಶ್ರಮಿಸುತ್ತಿದ್ದಾರೆ. ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ 2024ರ ಫೆಬ್ರವರಿಯಲ್ಲಿ ಹೋರಾಟ ಹಮ್ಮಿಕೊಳ್ಳಲಾಗಿತ್ತು. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಇಲ್ಲಿಯವರೆಗೂ ಸಮಸ್ಯೆ ಬಗೆಹರಿಸಿಲ್ಲ. ಬೆಳಗಾವಿ ಚಳಿಗಾಲದ ಅಧಿವೇಶನ ಸಂದರ್ಭದಲ್ಲಿ ಹಲವಾರು ಸಚಿವರು, ನೂರಾರು ಶಾಸಕರಿಗೆ ಮನವಿ ನೀಡಲಾಗಿತ್ತು. ಅಲ್ಲಿಯೂ ಏನೂ ಇತ್ಯರ್ಥವಾಗದ ಕಾರಣ ಆಶಾ ಕಾರ್ಯಕರ್ತೆಯರು ಈಗ ಅನಿವಾರ್ಯವಾಗಿ ಅನಿರ್ಧಿಷ್ಟಾವಧಿ ಧರಣಿ ನಡೆಸಲು ಸಿದ್ಧರಾಗಿದ್ದೇವೆ ಎಂದು ನಾಗಲಕ್ಷ್ಮೀ ತಿಳಿಸಿದ್ದಾರೆ.

## ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/105/2024–25/2321 ದಿನಾಂಕ: 04.01.2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/1 | 1–16.08 | ವ್ಯವಸಾಯ | ವಸತಿ |
| 2. | ಶ್ರೀ ದೊಡ್ಡಕೆಂಪಣ್ಣ ಬಿನ್ ಚಿಕ್ಕಪಿಳ್ಳಪ್ಪ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/2 | 1–06.08 | ವ್ಯವಸಾಯ | ವಸತಿ |
| 3. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/5 | 1–06.08 | ವ್ಯವಸಾಯ | ವಸತಿ |
| 4. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/3 | 1–03.08 | ವ್ಯವಸಾಯ | ವಸತಿ |
| 5. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 17/2 | 0–23.08 | ವ್ಯವಸಾಯ | ವಸತಿ |
| 6. | ಶ್ರೀಮತಿ ಬಿ.ಆರ್.ಗಿರಿಜಾ ಬಿನ್ ಎಂ. ರಾಮಯ್ಯ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/4 | 1–04.08 | ವ್ಯವಸಾಯ | ವಸತಿ |
| 7. | ಶ್ರೀಮತಿ ಬಿ.ಆರ್.ಗಿರಿಜಾ – ಎಂ.ರಾಮಯ್ಯ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 17/3 | 0–23.08 | ವ್ಯವಸಾಯ | ವಸತಿ |
| 8. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 61/6 | 1–16.08 | ವ್ಯವಸಾಯ | ವಸತಿ |
| 9. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 22/3 | 0–19 | ವ್ಯವಸಾಯ | ವಸತಿ |
| 10. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 22/4 | 0–19 & 00.04 ಗು 'ಎ' ಖರಾಬು | ವ್ಯವಸಾಯ | ವಸತಿ |
| 11. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 31 | 1–36 | ವ್ಯವಸಾಯ | ವಸತಿ |
| 12. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 59/5 | 0–32 | ವ್ಯವಸಾಯ | ವಸತಿ |
| 13. | ಶ್ರೀಮತಿ ಲಕ್ಷ್ಮಮ್ಮ ಕೋಂ ವಿ.ಚಂದ್ರುಡು ಇವರ ಪರವಾಗಿ ನೋಂದಾಯಿತ ಜಿಪಿಎದಾರರಾದ ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 62/1 | 0–34 | ವ್ಯವಸಾಯ | ವಸತಿ |
| 14. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 19/6 | 0–26.04 | ವ್ಯವಸಾಯ | ವಸತಿ |
| 15. | ಶ್ರೀ ಎನ್.ಗೋಪಾಲಯ್ಯ ಬಿನ್ ಲೇ॥ ರಂಗೇಗೌಡ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 19/3 | 1–00 | ವ್ಯವಸಾಯ | ವಸತಿ |
| 16. | ಶ್ರೀ ಕೃಷ್ಣಪ್ಪ ಬಿನ್ ನಂಜಪ್ಪ, ಶ್ರೀ ಮುನಿಯಪ್ಪ ಬಿನ್ ನಂಜಪ್ಪ, ಶ್ರೀ ಪಿಳ್ಳಪ್ಪ ಬಿನ್ ನಂಜಪ್ಪ, ಶ್ರೀ ಕೆಂಪಯ್ಯ ಬಿನ್ ನಂಜಪ್ಪ & ಶ್ರೀ ತಿಮ್ಮಯ್ಯ ಬಿನ್ ನಂಜಪ್ಪ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 19/5 | 1–12.08 | ವ್ಯವಸಾಯ | ವಸತಿ |
| 17. | ಶ್ರೀಮತಿ ಯಶೋದಮ್ಮ ಬಿನ್ ಲೇ॥ ನಾರಾಯಣಪ್ಪ, ಶ್ರೀ ಸುಬ್ರಮಣ್ಯ ಎನ್ ಬಿನ್ ಲೇ॥ ನಾರಾಯಣಪ್ಪ, ಶ್ರೀ ಎಸ್.ಎನ್.ಆನಂದ ಬಿನ್ ಲೇ॥ ನಾರಾಯಣಪ್ಪ & ಶ್ರೀಮತಿ ಶೋಭಾ ಬಿನ್ ಲೇ॥ ನಾರಾಯಣಪ್ಪ | ದೇವನಹಳ್ಳಿ | ಕುಂದಾಣ | ಚಿಕ್ಕಣ್ಣನಹೊಸಹಳ್ಳಿ | 19/2 | 0–26.04 | ವ್ಯವಸಾಯ | ವಸತಿ |

**ಷರಾ :–** ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/4118/2024–25

## ಕರ್ನಾಟಕ ಸರ್ಕಾರ
## ಕಾರ್ಯಪಾಲಕ ಅಭಿಯಂತರರವರ ಕಛೇರಿ
## ಪಂಚಾಯತ್‌ರಾಜ್‌ಇಂಜಿನಿಯರಿಂಗ್ ವಿಭಾಗ, ಮೈಸೂರು

ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.

**ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್ ಪ್ರಕಟಣೆ ಸಂಖ್ಯೆ. 08/2024–25 ದಿ: 02.01.2025**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ'ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ ಬೆಂಗಳೂರುರವರ ಸಹಯೋಗದೊಂದಿಗೆ, CPWD/KPWD/WRDO/PRED and any other Government Organisationನಲ್ಲಿ ನೊಂದಾಯಿತರಾಗಿರುವ ಅಥವಾ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಎನ್‌ರೋಲ್ ಮಾಡಿರುವ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ನಮೂನೆ KW-1,2,3 & 4 ಪದ್ಧತಿಯಂತೆ ವಿವಿಧ ಲೆಕ್ಕಶೀರ್ಷಿಕೆಗಳ ಯೋಜನೆ ಅನುದಾನದಡಿ ಟೆಂಡರ್ ಆಹ್ವಾನಿಸಲಾಗಿದ್ದು, ಮೈಸೂರು, ನಂಜನಗೂಡು ಮತ್ತು ಟಿ.ನರಸೀಪುರ ತಾಲ್ಲೂಕುಗಳಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಾಗಿದ್ದು, ಸದರಿ ಕಾಮಗಾರಿಗಳಲ್ಲಿ ಕಟ್ಟಡಗಳ ನಿರ್ಮಾಣ/ದುರಸ್ಥಿ / ಅಭಿವೃದ್ಧಿ ಹಾಗೂ ರಸ್ತೆ ನಿರ್ಮಾಣ ಕಾಮಗಾರಿಗಳಾಗಿದ್ದು, ಒಟ್ಟು 17 ಕಾಮಗಾರಿಗಳಿದ್ದು, ಸದರಿ ಕಾಮಗಾರಿಗಳ ಮೊತ್ತವು ರೂ.6.00 ಲಕ್ಷದಿಂದ 147.30 ಲಕ್ಷಗಳಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿ: 08.01.2025 ರಿಂದ 20.01.2025 ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ:18.01.2025ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ:21.01.2025ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್ ಮೆಂಟ್‌ನಂತೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಪೋನ್ ನಂ.0821–2560853) ರವರಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು, ಪಂ.ರಾ.ಇಂ.ವಿಭಾಗ, ಮೈಸೂರು
DIPR/DDMYS-1056/KSMCA-712/2024-25